**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 201/2024**

| | | | |
|---|---|---|---|
| ಹೆಸರು | | ಶ್ರೀ ಸಿದ್ದಶೆಟ್ಟಿ | ಚಾಸಾಃ 06 |
| ತಂದೆ ಹೆಸರು | | ಶ್ರೀ ಮಾದಶೆಟ್ಟಿ | ಫ್ರಾಸಾಃ 05 |
| ವಯಸ್ಸು | | 70 ವರ್ಷ | ಸಾಕ್ಷಿಯನ್ನು ದಿನಾಂಕಃ 28.11.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ಕೂಲಿ | |
| ವಾಸ | | ಚಿಕ್ಕಬೇಗೂರು ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಸಾಕ್ಷಿಯು ನಿಪಿ2 ಮಹಜರ್ ನಲ್ಲಿ ತಮ್ಮ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ3 ಫೋಟೋದಲ್ಲಿ ತಮ್ಮನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರ ನಡುವೆ ಜಗಳವಾದ ಕಾರಣ ಪೊಲೀಸರು ನನ್ನಿಂದ ಸಹಿ ಪಡೆದರು. ಸಾಕ್ಷಿಯು ಮುಂದುವರೆದು ನನಗೆ ಜಗಳವಾಗಿರುವುದು ಗೊತ್ತಿಲ್ಲ ಮಹಜರ್ ಗೆ ಸಹಿ ಮಾಡಿದ ಎಂದು ನುಡಿಯುತ್ತಾರೆ. ಆ ಕಾಲಕ್ಕೆ ಚಾಸ–5 ರವರು ಹಾಜರಿದ್ದರು. ಸುಮಾರು ಎರಡು ವರ್ಷಗಳ ಹಿಂದೆ ನಿಪಿ2 ಕ್ಕೆ ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 03.12.2023 ರಂದು ಪುಟ್ಟಮಾದಮ್ಮರವರ ಖಾಲಿ ನಿವೇಶನದಲ್ಲಿ ನಿಪಿ2 ರಂತೆ ಮಹಜರ್ ಮಾಡಿದರು ಎಂದರೆ ಸರಿ. ಚಾಸ–2 ರವರ ಜೊತೆ ಆರೋಪಿತರು ಜಗಳ ಮಾಡಿದ್ದರು

ಆ ವಿಚಾರಕ್ಕೆ ಮಹಜರ್ ಮಾಡಿದರು ಎಂದರೆ ಸರಿ. ಘಟನಾ ಸ್ಥಳವನ್ನು ಚಾಸ–2 ರವರು ತೋರಿಸಿದರು ಎಂದರೆ ಸರಿ. ಆ ಕಾಲಕ್ಕೆ ಮು.ಮಾ.1 ನ್ನು ಪೊಲೀಸರು ಅಮಾನತ್ತುಪಡಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ನಿಪಿ2 ನ್ನು ಬೆಳಿಗ್ಗೆ 8.00 ರಿಂದ 9.00 ರವರೆಗೆ ಬರೆದರು ಎಂದರೆ ಸರಿ. ಆ ಕಾಲಕ್ಕೆ ನಿಪಿ3 ರಂತೆ ಫೋಟೋ ತೆಗೆದರು ಎಂದರೆ ಸರಿ. ನಿಪಿ2 ರ ವಿಷಯವನ್ನು ತಿಳಿದು ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ನಿಪಿ2 ರ ಒಕ್ಕಣಿಕೆಗಳನ್ನು ಪೊಲೀಸರು ನನಗೆ ಓದಿ ಹೇಳಲಿಲ್ಲ ಎಂದರೆ ಸರಿ. ಪೊಲೀಸರ ಕೋರಿಕೆ ಮೇರೆಗೆ ನಿಪಿ2 ಕ್ಕೆ ಸಹಿ ಮಾಡಿದೆ ಎಂದರೆ ಸರಿ. ನಿಪಿ2 ಕ್ಕೆ ಬೇಗೂರು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ಆರೋಪಿಗಳು ಮತ್ತು ಚಾಸ–2 ರವರ ನಡುವೆಯಾದ ಗಲಾಟೆ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಪೊಲೀಸರ ಕೋರಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು, ಚಾಸ–1 ಮತ್ತು 2 ರವರು ಚೆನ್ನಾಗಿದ್ದಾರೆ ಎಂದರೆ ಸರಿ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**